

ಫೋಟೊ ಆಲ್ಬಂ ವೀಕ್ಷಣೆಯಲ್ಲಿ ತಲ್ಲೀನರಾಗಿರುವ ಶಾಂತರಸ– ಲಕ್ಷ್ಮಿದೇವಿ ದಂಪತಿ

ಇದರ ಮಧ್ಯ ಬಸಣ್ಣಿಗೆ ಅಚಾನಕವಾಗಿ ಒಂದು ರೂಪಾಯಿ ಸಿಗುತ್ತದೆ. ಆ ರೂಪಾಯಿ ಶ್ರೀಕಂಠನದಾಗಿದ್ದು, ಅವನು ಕೇಳಿದರೂ ಬಸಣ್ಣಿ ಇಲ್ಲ ಎನ್ನುತ್ತಾನೆ. ಈ ಕಣ್ಣಾಮುಚ್ಚಾಲೆಯಲ್ಲಿ ರೂಪಾಯಿ ಕದ್ದ ಆರೋಪ ಗುರುಪಾದನೆಂಬ ನತದೃಷ್ಟನ ಮೇಲೆ ಬರುತ್ತದೆ. ಇದೇ ಸಂದರ್ಭದಲ್ಲಿ ನೀಲಗಂಗಾ ಪ್ಲೇಗಿನಿಂದ ಸಾವನ್ನಪ್ಪುತ್ತಾಳೆ. ಇನ್ನೊಂದು ಕಡೆ ಬಡೆ ಗುರುಪಾದ ವಿನಾಕಾರಣ ತಪ್ಪಿತಸ್ಥನಾಗಿ, ಅವನಿಗೆ ಮಠದ ಊಟ ತಪ್ಪುತ್ತದೆ. ಒಂದು ರೂಪಾಯಿ ತಾನು ತೆಗೆದುಕೊಂಡಿದ್ದೇನೆ ಎಂದು ಬಸಣ್ಣಿ ಅನಿವಾರ್ಯವಾಗಿ ಒಪ್ಪಿಕೊಳ್ಳುತ್ತಾನೆ. ನೀಲಗಂಗಾಳ ಸಾವು ಹಾಗೂ ಗುರುಪಾದನಿಗಾದ ಶಿಕ್ಷೆಯ ಘಟನೆಗಳು ಬಸಣ್ಣಿಯನ್ನು ಹುಚ್ಚನನ್ನಾಗಿಸುತ್ತವೆ. ಸುಡುಗಾಡಿನ ಮಧ್ಯ ಇರುವ ಮಠ, ಅಲ್ಲಿರುವ ಅಗ್ನಿಷ್ಟಿಕೆ, ಬಸಣ್ಣಿಯ ಬಡತನ, ನೀಲಗಂಗಾಳ ಪ್ರೇಮ, ಗುರುಪಾದನ ಪಾಪಪ್ರಜ್ಞೆ – ಇವೆಲ್ಲವನ್ನೂ ಶಾಂತರಸರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಶಾಂತರಸರು ತಮ್ಮ ಕಥೆ–ಕಾದಂಬರಿಗಳಲ್ಲಿ ಬಳಸುವ ಭಾಷೆ ಅಪ್ಪಟ ರಾಯಚೂರಿನಿಂದ ತುಸು ದೂರವಿರುವ ದೇವದುರ್ಗದ ಗಡಿಯಂಚಿನದ್ದು. ರಾಯಚೂರಿನಲ್ಲಿ ಬಳಸುವ ಭಾಷೆ ತೆಲುಗು ಮಿಶ್ರಿತವಾಗಿದ್ದರೆ, ದೇವದುರ್ಗ ತಾಲ್ಲೂಕಿಗೆ ಹೊಂದಿಕೊಂಡ ಊರುಗಳ ಭಾಷೆ ಭಿನ್ನವಾದುದು. ಮಾನವಿ, ಸಿಂಧನೂರು, ಗಂಗಾವತಿ ಸೇರಿದಂತೆ ರಾಯಚೂರು ಸೀಮೆಯ ಭಾಷೆಯನ್ನು ಹೀಗೆಯೇ ಎಂದು ಹೇಳಲು ಸಾಧ್ಯವಿಲ್ಲ. ಅದು ಪ್ರತಿ 30 ಕಿ.ಮೀ.ಗೂ ಬದಲಾಗುತ್ತದೆ ಎಂದು ಶಾಂತರಸರೇ ಹೇಳುತ್ತಿದ್ದರು. ಈಗಲೂ ಹಳ್ಳಿಗಳಲ್ಲಿರುವ ವಾಲ್ಮೀಕಿ ಜನಾಂಗ ತಮ್ಮ ಸಂವಹನಕ್ಕಾಗಿ ಒಂದು ಭಾಷೆಯನ್ನು ಕಂಡುಕೊಂಡಿದ್ದಾರೆ. ಅದು ತೆಲುಗೂ ಅಲ್ಲ, ಕನ್ನಡವೂ ಅಲ್ಲ. ಎರಡನ್ನೂ ಕಲಿಸಿ ಎರಕ ಹೊಯ್ದ ಭಾಷೆ ಅದು.

ಶಾಂತರಸರಿಗೆ ಕೊನೆ ಕೊನೆಗೆ ಬಹುವಾಗಿ